# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 2022-23ನೇ ಸಾಲಿನಲ್ಲಿ ರಾಜ್ಯದ ಆಯ್ದ ಗ್ರಾಮ ಪಂಚಾಯಿತಿ ಕೆರೆಗಳಲ್ಲಿ ಮೀನುಮರಿಗಳನ್ನು ಉಚಿತವಾಗಿ ದಾಸ್ತಾನು ಮಾಡಿ ಮೀನು ಕೃಷಿಯನ್ನು ಅಭಿವೃದ್ಧಿಪಡಿಸುವ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ:- ಮೀನುಗಾರಿಕೆ ನಿರ್ದೇಶಕರ ಏಕ ಕಡತ ಪತ್ರ ಸಂಖ್ಯೆ: DoF-TECHO-FYP/1/15/2022, ದಿನಾಂಕ: 17-03-2022.

******

ರಾಜ್ಯ ಸರ್ಕಾರ ಮೀನುಗಾರಿಕೆ
- 8 APR 2022

**ಪ್ರಸ್ತಾವನೆ:**

2022-23 ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-65ರಲ್ಲಿ ರಾಜ್ಯದ ಆಯ್ದ ಗ್ರಾಮ ಪಂಚಾಯಿತಿ ಕೆರೆಗಳಲ್ಲಿ ಪ್ರತಿ ಕೆರೆಯ ಜಲ ವಿಸ್ತೀರ್ಣಕ್ಕನುಗುಣವಾಗಿ ಮೀನು ಮರಿಗಳನ್ನು ಉಚಿತವಾಗಿ ದಾಸ್ತಾನು ಮಾಡಿ ಮೀನು ಕೃಷಿಯನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಲಾಗಿದೆ ಎಂದು ಘೋಷಿಸಲಾಗಿದೆ.

ಮೇಲೆ ಓದಲಾದ ನಿರ್ದೇಶಕರು, ಮೀನುಗಾರಿಕೆ ಇಲಾಖೆ ಇವರ ಏಕ ಕಡತ ಪತ್ರದಲ್ಲಿ, ರಾಜ್ಯದ ಗ್ರಾಮ ಪಂಚಾಯಿತಿಗಳಿಗೆ ಆದಾಯ ತರುವ ದೃಷ್ಠಿಯಿಂದ ಮತ್ತು ಗ್ರಾಮ ಪಂಚಾಯಿತಿಗಳನ್ನು ಬಲಪಡಿಸುವ ಉದ್ದೇಶದಿಂದ ಆಯ್ದ 5650 ಗ್ರಾಮ ಪಂಚಾಯಿತಿ ಕೆರೆಗಳಲ್ಲಿ ಪ್ರತೀ ಕೆರೆಯ ಜಲವಿಸ್ತೀರ್ಣಕ್ಕನುಗುಣವಾಗಿ ಗರಿಷ್ಠ ರೂ.10,000/- ಮೌಲ್ಯದ ಬಲಿತ ಬಿತ್ತನೆ ಮೀನುಮರಿಗಳನ್ನು ಉಚಿತವಾಗಿ ದಾಸ್ತಾನು ಮಾಡಿ ಮೀನು ಕೃಷಿಯನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಮೀನು ಕೃಷಿಯನ್ನು ಅಭಿವೃದ್ಧಿಪಡಿಸಿ ಒಳನಾಡು ಮೀನು ಉತ್ಪಾದನೆಯನ್ನು ಹೆಚ್ಚಿಸಲು "ಗ್ರಾಮ ಪಂಚಾಯಿತಿ ಕೆರೆಗಳಲ್ಲಿ ಉಚಿತವಾಗಿ ಮೀನುಮರಿ ಬಿತ್ತನೆ" ಯೋಜನೆಯಡಿ ರೂ. 5.65 ಕೋಟಿ ವೆಚ್ಚದಲ್ಲಿ 5650 ಗ್ರಾಮ ಪಂಚಾಯಿತಿ ಕೆರೆಗಳಲ್ಲಿ ಮೀನುಮರಿಗಳನ್ನು ಬಿತ್ತನೆ ಮಾಡಲಾಗುವುದು ಎಂದು ತಿಳಿಸಿರುತ್ತಾರೆ. ಈ ಹಿನ್ನಲೆಯಲ್ಲಿ ಒಳನಾಡು ಮೀನು ಉತ್ಪಾದನೆಯನ್ನು ಹೆಚ್ಚಿಸಲು "ಗ್ರಾಮ ಪಂಚಾಯಿತಿ ಕೆರೆಗಳಲ್ಲಿ ಉಚಿತವಾಗಿ ಮೀನುಮರಿ ಬಿತ್ತನೆ" ಎಂಬ ಹೊಸ ಕಾರ್ಯಕ್ರಮವನ್ನು ಲೆಕ್ಕ ಶೀರ್ಷಿಕೆ 2405-00-101-0-03-ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ ಯೋಜನೆಯಡಿ ಅನುಬಂಧದಲ್ಲಿ ನೀಡಿರುವ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ನಿಜಶರಣ ಶ್ರೀ ಅಂಬಿಗರ ಚೌಡಯ್ಯ ಒಳನಾಡು ಮೀನುಗಾರಿಕೆ ಅಭಿವೃದ್ಧಿ ಕೇಂದ್ರ, ಬಾಗಲಕೋಟೆ ಇವರ ಮುಖಾಂತರ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಲು ಕೋರಿರುತ್ತಾರೆ.

Kamakshi U.A2-

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಪಸಂಮೀ ಇ-117 ಮೀಇಯೋ 2022, ಬೆಂಗಳೂರು ದಿನಾಂಕ: 07-04-2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2022-23 ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-65 ರಂತೆ, ಒಳನಾಡು ಮೀನು ಉತ್ಪಾದನೆಯನ್ನು ಹೆಚ್ಚಿಸಲು "ಗ್ರಾಮ ಪಂಚಾಯಿತಿ ಕೆರೆಗಳಲ್ಲಿ ಉಚಿತವಾಗಿ ಮೀನುಮರಿ ಬಿತ್ತನೆ" ಎಂಬ ಹೊಸ ಕಾರ್ಯಕ್ರಮವನ್ನು ರೂ.565.00 ಲಕ್ಷ (ಐನೂರ ಅರವತ್ತೈದು ಲಕ್ಷ ರೂಪಾಯಿಗಳು ಮಾತ್ರ) ಗಳ ವೆಚ್ಚದಲ್ಲಿ ನಿಜಶರಣ ಶ್ರೀ ಅಂಬಿಗರ ಚೌಡಯ್ಯ ಒಳನಾಡು ಮೀನುಗಾರಿಕೆ ಅಭಿವೃದ್ಧಿ ಕೇಂದ್ರ, ಬಾಗಲಕೋಟೆ ಮುಖಾಂತರ ಈ ಆದೇಶದ **ಅನುಬಂಧ-1** ನಮೂದಿಸಿರುವ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಹಾಗೂ **ಅನುಬಂಧ-2** ರಲ್ಲಿ ನಮೂದಿಸಿರುವ ಜಿಲ್ಲಾವಾರು ಗ್ರಾಮ ಪಂಚಾಯಿತಿ ಕೆರೆಗಳ ಸಂಖ್ಯೆಯಾನುಸಾರ ಮೀನುಮರಿ ದಾಸ್ತಾನು ಮಾಡಿ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಲಾಗಿದೆ.

ಸದರಿ ಕಾರ್ಯಕ್ರಮಕ್ಕೆ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2022-23 ನೇ ಸಾಲಿನ ಲೆಕ್ಕ ಶೀರ್ಷಿಕೆ 2405-ಮೀನುಗಾರಿಕೆ- 00- 101- ಒಳನಾಡು ಮೀನುಗಾರಿಕೆಗಳು– 0-03-ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ-059-ಸಹಾಯಧನ ಯೋಜನೆಯಡಿ ಒದಗಿಸಿರುವ ಅನುದಾನದಿಂದ ಭರಿಸತಕ್ಕದ್ದು.

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿಎಸ್-ಪಿಎಫ್‌ಓ/20/2022, ದಿನಾಂಕ: 30-03-2022 ರಲ್ಲಿ ಹಾಗೂ ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ/53/ವೆಚ್ಚ-4/2022, ದಿನಾಂಕ: 05-04-2022 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Kamakshi U.A 7/4/2022
(ಕಾಮಾಕ್ಷಿ ಯು.ಎ.)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

07/04/2022

**ಇವರಿಗೆ**

1) ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ)(ಇ&ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಬೆಂಗಳೂರು.
2) ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.

3) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
4) ನಿರ್ದೇಶಕರು (ಪಿಎಫ್‌ಡಿ), ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5) ಜಂಟಿ ನಿರ್ದೇಶಕರು, ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
6) ವ್ಯವಸ್ಥಾಪಕ ನಿರ್ದೇಶಕರು, ನಿಜಶರಣ ಶ್ರೀ ಅಂಬಿಗರ ಚೌಡಯ್ಯ ಒಳನಾಡು ಮೀನುಗಾರಿಕೆ ಅಭಿವೃದ್ಧಿ ಕೇಂದ್ರ, ಬಾಗಲಕೋಟೆ.
7) ಸಂಬಂಧಪಟ್ಟ ಮೀನುಗಾರಿಕೆ ಜಂಟಿ ನಿರ್ದೇಶಕರುಗಳಿಗೆ – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
8) ಆಂತರಿಕ ಆರ್ಥಿಕ ಸಲಹೆಗಾರರು, ಕೃ.ತೋ. ಮತ್ತು ಪ.ಸಂ.ಮೀ. ಇಲಾಖೆ.
9) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನಸೌಧ, ಬೆಂಗಳೂರು.
10) ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
11) ಕಂಟ್ರೋಲ್ ರೂಮ್-ಕಂ-24x7 ಹೆಲ್ಪ್ ಲೈನ್ (ಸಹಾಯವಾಣಿ), ಮೀನುಗಾರಿಕೆ ಇಲಾಖೆ.
12) ಶಾಖಾ ರಕ್ಷಾ ಕಡತ / ಹೆಚ್ಚಿನ ಪ್ರತಿಗಳು / ಸಮನ್ವಯ-ಕಂಪೆಂಡಿಯಂ.

ಪ್ರತಿಯನ್ನು

1) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2) ಸರ್ಕಾರದ ಕಾರ್ಯದರ್ಶಿಗಳು / ಜಂಟಿ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರು, ಪಸಂಮೀ ಇಲಾಖೆ, ವಿಕಾಸಸೌಧ, ಬೆಂಗಳೂರು.

ಆದೇಶ ಸಂಖ್ಯೆ: ಪಸಂಮೀ ಇ-117 ಮೀಇಯೋ 2022, ಬೆಂಗಳೂರು ದಿನಾಂಕ: 07-04-2022ರ

## ಅನುಬಂಧ-2

## "ಗ್ರಾಮ ಪಂಚಾಯಿತಿ ಕೆರೆಗಳಲ್ಲಿ ಉಚಿತವಾಗಿ ಮೀನುಮರಿ ಬಿತ್ತನೆ" ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಪಾಲಿಸಬೇಕಾದ ಷರತ್ತು ಮತ್ತು ನಿಬಂಧನೆಗಳು

1) ಈ ಯೋಜನೆಯಡಿ ಮೀನುಮರಿಗಳನ್ನು ದಾಸ್ತಾನು ಮಾಡಲು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಪೂರ್ಣಕಾಲಿಕ / ದೀರ್ಘಕಾಲಿಕ ಕೆರೆಯನ್ನು ಆಯ್ಕೆ ಮಾಡತಕ್ಕದ್ದು. ಕೆರೆಯು ಕನಿಷ್ಠ 5-6 ಅಡಿ ಆಳವನ್ನು ಹೊಂದಿರಬೇಕು. ಜಲ ವಿಸ್ತೀರ್ಣದ ಶೇ.50ರಷ್ಟು ಭಾಗವನ್ನು ಉಪಯುಕ್ತ ಜಲವಿಸ್ತೀರ್ಣ ಎಂದು ಪರಿಗಣಿಸುವುದು.

2) ಸಂಬಂಧಿಸಿದ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಂಬಂಧಿಸಿದ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಮೀನುಗಾರಿಕೆ ಇಲಾಖಾಧಿಕಾರಿಗಳನ್ನೊಳಗೊಂಡ ಸಮಿತಿಯನ್ನು ಜಿಲ್ಲಾ ಮಟ್ಟದಲ್ಲಿ ರಚಿಸಿಕೊಂಡು ಕೆರೆಗಳನ್ನು ಆಯ್ಕೆ ಮಾಡತಕ್ಕದ್ದು ಹಾಗೂ ಜಿಲ್ಲಾ ಮಟ್ಟದ ಮೀನುಗಾರಿಕೆ ಅಧಿಕಾರಿಗಳು ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು.

3) ಗ್ರಾಮ ಪಂಚಾಯಿತಿಯಿಂದ ವಿಲೇವಾರಿಯಾಗದೇ ಇರುವ ಕೆರೆಗಳನ್ನು ಆಯ್ಕೆ ಮಾಡಲು ಪ್ರಥಮ ಆದ್ಯತೆ ನೀಡುವುದು. ನಂತರದ ಆದ್ಯತೆಯನ್ನು ಈಗಾಗಲೇ ವಿಲೇವಾರಿಯಾಗಿರುವ ಕೆರೆಗಳಿಗೆ ನೀಡುವುದು. ಮೀನುಮರಿಗಳನ್ನು ದಾಸ್ತಾನು ಮಾಡಿದ 2 ರಿಂದ 3 ತಿಂಗಳ ನಂತರ ವಿಲೇವಾರಿಯಾಗದೇ ಇರುವ ಕೆರೆಗಳ ಮೀನು ಪಾಶುವಾರು ಹಕ್ಕನ್ನು ನಿಯಮಾನುಸಾರ ಗ್ರಾಮ ಪಂಚಾಯಿತಿಗಳು ವಿಲೇವಾರಿ ಮಾಡತಕ್ಕದ್ದು.

4) ಕೆರೆಯ ಉಪಯುಕ್ತ ಜಲವಿಸ್ತೀರ್ಣಕ್ಕನುಗುಣವಾಗಿ ಪ್ರತಿ ಹೆಕ್ಟೇರ್ ಉಪಯುಕ್ತತಾ ಜಲವಿಸ್ತೀರ್ಣಕ್ಕೆ 4000 ಬಲಿತ ಬಿತ್ತನೆ ಮೀನುಮರಿಗಳಂತೆ ಗರಿಷ್ಠ ರೂ.10,000-00 ಮೌಲ್ಯದ ಬಲಿತ ಬಿತ್ತನೆ ಮೀನುಮರಿಗಳನ್ನು ಕೆರೆಗಳಿಗೆ ಬಿತ್ತನೆ ಮಾಡಲು ಅವಕಾಶ ಮಾಡಲಾಗಿದೆ.

5) ಕಟ್ಲಾ ಮತ್ತು ಸಾಮಾನ್ಯಗೆಂಡೆ ಜಾತಿಯ ಮೀನುಮರಿಗಳನ್ನು ಶೇ 50:50 ರ ಅನುಪಾತದಲ್ಲಿ ದಾಸ್ತಾನು ಮಾಡತಕ್ಕದ್ದು.

6) ಸರ್ಕಾರದ ಆದೇಶ ಸಂಖ್ಯೆ: ಪಸಂಮೀ/ಇ-135/ಮೀಇಯೋ/2019, ದಿನಾಂಕ: 21-10-2020 ರಲ್ಲಿ ಬಲಿತ ಬಿತ್ತನೆ ಮೀನುಮರಿಗಳಿಗೆ ನಿಗದಿಪಡಿಸಿರುವ ದರಗಳಂತೆ (ಸಾಗಾಣಿಕೆ ವೆಚ್ಚ ಸೇರಿ) ಸರಬರಾಜುದಾರರಿಗೆ ಹಣ ಪಾವತಿಸತಕ್ಕದ್ದು.

7) ಗ್ರಾಮ ಪಂಚಾಯಿತಿಯಿಂದ ವಿಲೇವಾರಿಯಾಗುವ ಕೆರೆಗಳಿಗೆ ಮೀನುಮರಿಗಳನ್ನು ಬೆಳಸಲು ಗ್ರಾಮ ಮಟ್ಟದಲ್ಲಿ ಸೂಕ್ತ ವ್ಯಕಿಯನ್ನು ಆಯ್ಕೆ ಮಾಡಿ ತರಬೇತಿ ನೀಡುವುದು. ಹಾಗೂ ಮೀನು ವಾರ್ಷಿಕ ಆದಾಯ ಪಡೆಯುವ ಬಗ್ಗೆ ಎಂಒಯು ಮಾಡಿಕೊಳ್ಳುವುದು.

8) ಮೀನುಮರಿಗಳನ್ನು ಸರಬರಾಜು ಮಾಡಲು ಆಸಕ್ತಿಯಿರುವ ಮೀನುಮರಿ ಸರಬರಾಜುದಾರರಿಂದ ಆಸಕ್ತಿ ವ್ಯಕ್ತಪಡಿಸಿ ಅರ್ಜಿ ಆಹ್ವಾನಿಸುವುದು. ಈ ಸಂಬಂಧ ಇಲಾಖೆಯಿಂದ ವ್ಯಾಪಕ ಪ್ರಚಾರ ನೀಡುವುದು.

9) ಮೀನುಗಾರಿಕೆ ನಿರ್ದೇಶನಾಲಯದಿಂದ ಎಂಪಾನೆಲ್ ಮಾಡಿರುವ ಅಧಿಕೃತ ಮೀನುಮರಿ ಸರಬರಾಜುದಾರರಿಂದ ಮೀನುಮರಿಗಳನ್ನು ಖರೀದಿಸತಕ್ಕದ್ದು. ಮೀನುಗಾರಿಕೆ ನಿರ್ದೇಶನಾಲಯದಿಂದ ಅನುಮತಿ ಪಡೆದನಂತರ ಮೀನುಮರಿಗಳನ್ನು ಕೆರೆಗಳಿಗೆ ದಾಸ್ತಾನು ಮಾಡಲು ಸರಬರಾಜು ಆದೇಶವನ್ನು ಆಯಾ ಜಂಟಿ ನಿರ್ದೇಶಕರು ನೀಡತಕ್ಕದ್ದು.

10) ಮೀನುಮರಿಗಳನ್ನು ಸರಬರಾಜು ಮಾಡಲು ಆಸಕ್ತಿಯಿರುವ ಮೀನುಮರಿ ಸರಬರಾಜು ದಾರರು ಕಡ್ಡಾಯವಾಗಿ ಇಲಾಖೆ ವ್ಯಾಪ್ತಿಯ ಮೀನುಮರಿ ಉತ್ಪಾದನಾ ಕೇಂದ್ರಗಳಿಂದ ಮೀನುಮರಿಗಳನ್ನು ಖರೀದಿಸಿ ಪಾಲನೆ ಮಾಡಿರತಕ್ಕದ್ದು. ಇದನ್ನು ತಾಲ್ಲೂಕು ಮಟ್ಟದ ಮತ್ತು ಜಿಲ್ಲಾ ಮಟ್ಟದ ಮೀನುಗಾರಿಕೆ ಅಧಿಕಾರಿಗಳು ದೃಢಪಡಿಸುವುದು.

11) ಇಲಾಖೆಯಿಂದ ಅನುಮೋದಿತ ಅಧಿಕೃತ ಖಾಸಗಿ ಮೀನುಮರಿ ಪಾಲನೆದಾರರು ಈ ಯೋಜನೆಯಡಿ ಬಲಿತ ಬಿತ್ತನೆ ಮೀನುಮರಿಗಳನ್ನು ಸರಬರಾಜು ಮಾಡಲು ಅರ್ಹರಿರುತ್ತಾರೆ.

12) ಮೀನುಮರಿಗಳನ್ನು ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಅಧ್ಯಕ್ಷರು /ಸದಸ್ಯರು/ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು / ಮೀನುಗಾರಿಕೆ ಸಹಾಯಕ ನಿರ್ದೇಶಕರು / ಜಿಲ್ಲಾ ಮಟ್ಟದ ಮೀನುಗಾರಿಕೆ ಅಧಿಕಾರಿಗಳ ಸಮ್ಮುಖದಲ್ಲಿ ದಾಸ್ತಾನು ಮಾಡಿ. ದಾಸ್ತಾನು ಮಾಡುವ ಜಿ.ಪಿ.ಎಸ್. ಫೋಟೋ ವಿಡಿಯೋ ಚಿತ್ರೀಕರಣವನ್ನು ಕಡ್ಡಾಯ ವಾಗಿ ಒದಗಿಸತಕ್ಕದ್ದು. ಹಗಲು ಹೊತ್ತಿನಲ್ಲಿಯೇ ಮೀನುಮರಿ ದಾಸ್ತಾನು ಮಾಡುವುದು.

13) ಬಲಿತ ಬಿತ್ತನೆ ಮೀನು ಮರಿಗಳು ಕನಿಷ್ಠ 70 ಮಿ.ಮೀ ಉದ್ದವಿರತಕ್ಕದ್ದು.

14) ಪ್ರತಿ ಗ್ರಾಮ ಪಂಚಾಯಿತಿಯಿಂದ ಒಂದು ಕೆರೆಯನ್ನು ಮಾತ್ರ ಆಯ್ಕೆ ಮಾಡತಕ್ಕದ್ದು. ಜಿಲ್ಲೆಯಲ್ಲಿರುವ ಗ್ರಾಮ ಪಂಚಾಯಿತಿಗಳ ಸಂಖ್ಯೆಗಿಂತ ಹೆಚ್ಚುವರಿ ಗುರಿ ನೀಡಿದ್ದಲ್ಲಿ ಜಿಲ್ಲಾ ಗುರಿಗನುಗುಣವಾಗಿ ಹೆಚ್ಚು ಕೆರೆಗಳನ್ನು ಜಿಲ್ಲಾ ಮಟ್ಟದ ಸಮಿತಿಯ ಅನುಮೋದನೆ ಪಡೆದು ಆಯ್ಕೆ ಮಾಡುವುದು. ಜಿಲ್ಲೆಯಲ್ಲಿಯೂ ನಿಗದಿತ ಗುರಿಯಂತೆ ಕೆರೆಗಳು ಲಭ್ಯವಿಲ್ಲದಿದ್ದಲ್ಲಿ ಬೇರೆ ಜಿಲ್ಲೆಗೆ ನಿಗದಿಪಡಿಸಿದ ಗುರಿಗಳನ್ನು ಮರುಹಂಚಿಕೆ ಮಾಡುವ ಅಧಿಕಾರವನ್ನು ಮೀನುಗಾರಿಕೆ ನಿರ್ದೇಶಕರು ಹೊಂದಿರುತ್ತಾರೆ. ತಾಲ್ಲೂಕಿನ ಮೀನುಗಾರಿಕೆ ಸಹಾಯಕ ನಿರ್ದೇಶಕರು ಮತ್ತು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಕೆರೆಯನ್ನು ಪರಿಶೀಲಿಸಿ ಮೀನು ಕೃಷಿಗೆ ಸೂಕ್ತವೆಂದು ಕಂಡುಬಂದಲ್ಲಿ. ಕೆರೆಯನ್ನು ಆಯ್ಕೆ ಮಾಡಿ ಆಯ್ಕೆ ಸಮಿತಿಯಲ್ಲಿ ಅನುಮೋದನೆ ಪಡೆಯುವುದು.

15) ಮಂಜೂರಾತಿ ನೀಡುವ ಅಧಿಕಾರವು ಆಯಾ ಮೀನುಗಾರಿಕೆ ಜಂಟಿ ನಿರ್ದೇಶಕರಿಗೆ ಪ್ರದತ್ತವಾಗಿರುತ್ತದೆ.

16) ಸರಬರಾಜು ಆದೇಶ ನೀಡಿದ 15 ದಿನಗಳ ಒಳಗೆ ಮೀನುಮರಿ ದಾಸ್ತಾನು ಮಾಡಿ ಸರಬರಾಜುದಾರರು ಮೂಲ ಬಿಲ್ಲುಗಳನ್ನು ಹಣ ಪಾವತಿಗಾಗಿ ಸಂಬಂಧಿಸಿದ ಮೀನುಗಾರಿಕೆ ಸಹಾಯಕ ನಿರ್ದೇಶಕರು ರವರಿಗೆ ಸಲ್ಲಿಸುವುದು. ಮೀನುಗಾರಿಕೆ ಸಹಾಯಕ ನಿರ್ದೇಶಕರು ರವರು ಬಿಲ್ಲುಗಳು ಮತ್ತು ಇತರೆ ದಾಖಲಾತಿಗಳೊಂದಿಗೆ ಮಂಜೂರಾತಿಗಾಗಿ ಜಿಲ್ಲಾ ಮಟ್ಟದ ಅಧಿಕಾರಿಗಳ ಮುಖಾಂತರ ಮೀನುಗಾರಿಕೆ ಜಂಟಿ ನಿರ್ದೇಶಕರಿಗೆ ಸಲ್ಲಿಸುವುದು.

17) ಮಂಜೂರಾತಿ ನೀಡಿದ ನಂತರ ಮೀನುಮರಿ ಸರಬರಾಜುದಾರರಿಗೆ ಹಣ ಪಾವತಿಸಲು. ಮೂಲ ಬಿಲ್ಲು, ಮಂಜೂರಾತಿ ಆದೇಶ ಮತ್ತು ಬ್ಯಾಂಕ್ ಖಾತೆ ವಿವರಗಳೊಂದಿಗೆ ವ್ಯವಸ್ಥಾಪಕ ನಿರ್ದೇಶಕರು, ನಿಜಶರಣ ಶ್ರೀ ಅಂಬಿಗರ ಚೌಡಯ್ಯ ಒಳನಾಡು ಮೀನುಗಾರಿಕೆ ಅಭಿವೃದ್ಧಿ ಕೇಂದ್ರ, ಬಾಗಲಕೋಟೆ ರವರಿಗೆ ಮೀನುಗಾರಿಕೆ ಜಂಟಿ ನಿರ್ದೇಶಕರು ಪ್ರಸ್ತಾವನೆ ಸಲ್ಲಿಸುವುದು.

18) ಕೆರೆಯಲ್ಲಿ ಬಿತ್ತನೆ ಮಾಡಿದ ಮೀನುಮರಿಗಳ ಜಾತಿವಾರು ಪ್ರಮಾಣ ಮತ್ತು ಮೀನು ಹಿಡುವಳಿ (ಜಾತಿ ಮತ್ತು ಗಾತ್ರವಾರು) ವಿವರಗಳನ್ನು ಗ್ರಾಮ ಪಂಚಾಯಿತಿಗಳು ಆಗಿಂದಾಗ್ಗೆ ಇಲಾಖೆಗೆ ಒದಗಿಸುವುದು.

Kamakshi U.A

(ಕಾಮಾಕ್ಷಿ ಯು.ಎ.) 7/4/2022

ಸರ್ಕಾರದ ಅಧೀನ ಕಾರ್ಯದರ್ಶಿ,

ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ

(ಮೀನುಗಾರಿಕೆ)

ಆದೇಶ ಸಂಖ್ಯೆ: ಪಸಂಮೀ ಇ-117 ಮೀಇಯೋ 2022, ಬೆಂಗಳೂರು ದಿನಾಂಕ: 07-04-2022ರ

## ಅನುಬಂಧ-2

## ಮೀನುಮರಿ ದಾಸ್ತಾನು ಮಾಡಲು ಆಯ್ಕೆ ಮಾಡಬೇಕಾದ ಗ್ರಾಮ ಪಂಚಾಯಿತಿವಾರು ಕೆರೆಗಳ ಸಂಖ್ಯೆ

| ಕ್ರ. ಸಂ. | ಜಿಲ್ಲೆ | ಗ್ರಾಮ ಪಂಚಾಯಿತಿಗಳ ಸಂಖ್ಯೆ | ಹಾಲಿ ಇರುವ ಕೆರೆಗಳ ಸಂಖ್ಯೆ | ಮೀನುಮರಿ ದಾಸ್ತಾನು ಮಾಡಲು ಆಯ್ಕೆ ಮಾಡಬೇಕಾದ ಕೆರೆಗಳ ಸಂಖ್ಯೆ |
|---|---|---|---|---|
| 1 | ಬಾಗಲಕೋಟೆ | 196 | 26 | 20 |
| 2 | ಬೆಂಗಳೂರು ನಗರ | 88 | 143 | 88 |
| 3 | ಬೆಂಗಳೂರು ಗ್ರಾಮಾಂತರ | 101 | 484 | 101 |
| 4 | ಬೆಳಗಾವಿ | 498 | 626 | 300 |
| 5 | ಬಳ್ಳಾರಿ | 100 | 72 | 50 |
| 6 | ಬೀದರ್ | 185 | 115 | 100 |
| 7 | ವಿಜಯಪುರ | 211 | 89 | 50 |
| 8 | ಚಾಮರಾಜನಗರ | 130 | 221 | 130 |
| 9 | ಚಿಕ್ಕಮಗಳೂರು | 226 | 1766 | 427 |
| 10 | ಚಿತ್ರದುರ್ಗ | 189 | 122 | 50 |
| 11 | ದಕ್ಷಿಣ ಕನ್ನಡ | 223 | 251 | 200 |
| 12 | ದಾವಣಗೆರೆ | 196 | 154 | 125 |
| 13 | ಧಾರವಾಡ | 144 | 439 | 144 |
| 14 | ಗದಗ | 122 | 96 | 50 |
| 15 | ಕಲಬುರಗಿ | 261 | 41 | 25 |
| 16 | ಹಾಸನ | 267 | 3128 | 500 |
| 17 | ಹಾವೇರಿ | 223 | 1153 | 300 |
| 18 | ಕೊಡಗು | 104 | 419 | 150 |
| 19 | ಕೋಲಾರ | 156 | 2328 | 156 |
| 20 | ಕೊಪ್ಪಳ | 153 | 40 | 25 |
| 21 | ಮಂಡ್ಯ | 233 | 688 | 300 |

| | | | | |
|---|---|---|---|---|
| 22 | ಮೈಸೂರು | 257 | 873 | 300 |
| 23 | ರಾಯಚೂರು | 178 | 222 | 150 |
| 24 | ಶಿವಮೊಗ್ಗ | 266 | 4921 | 741 |
| 25 | ತುಮಕೂರು | 330 | 1232 | 450 |
| 26 | ಉಡುಪಿ | 155 | 45 | 36 |
| 27 | ಉತ್ತರ ಕನ್ನಡ | 229 | 694 | 229 |
| 28 | ಚಿಕ್ಕಬಳ್ಳಾಪುರ | 157 | 1269 | 157 |
| 29 | ರಾಮನಗರ | 126 | 417 | 126 |
| 30 | ಯಾದಗಿರಿ | 122 | 290 | 120 |
| 31 | ವಿಜಯನಗರ | 137 | 65 | 50 |
| | **ಒಟ್ಟು** | **5963** | **22429** | **5650** |

Kamakshi U.A 7/4/2022
(ಕಾಮಾಕ್ಷಿ, ಯು.ಎ.)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

07/04/2022